'ಆದರೆ ಸೆನ್ಯೂರ್ ನೊಗೇರಾ. ರಾತ್ರೆಯ ಕರೆ ಬರೋವರೆಗೂ ಏನು ಮಾಡ್ತೀಯಾ?' ಕೊನ್ಸಸಾಂವ್ ತಾಯಿ ಕೇಳಿದರು.

'ಪುಸ್ತಕ ಓದುತ್ತೇನೆ ಮ್ಯಾಡಮ್ ಇನಾಸಿಯ'.

ನನ್ನ ಹತ್ತರ 'ದ ಥ್ರೀ ಮಸ್ಕಟಿಯರ್ಸ್' ಪುಸ್ತಕದ ಅನುವಾದವಿತ್ತು. ಇದನ್ನು ಜರ್ನಲ್ ಆಫ್ ಕಾಮರ್ಸ್‌ನಲ್ಲಿ ಧಾರಾವಾಹಿಯಾಗಿ ಮೂಲತಃ ಪ್ರಕಟಿಸಿದ್ದರು ಅಂತ ನೆನಪು. ಮನೆಯವರೆಲ್ಲ ಮಲಗಿರಲು, ಕೋಣೆಯ ನಡುವಿನಲ್ಲಿದ್ದ ಮೇಜಿನ ಹತ್ತಿರ ಕೂತು, ಚಿಮಣಿ ಎಣ್ಣೆಯ ಕಂದೀಲಿನ ಬೆಳಕಿನಲ್ಲಿ ಡಅರ್ಟಾನ್ಯಾನ್ನ ಒಡ್ಡು ಕುದುರೆಯ ಮೇಲೆ ಸವಾರಿ ಮಾಡುತ್ತ ಹೊಸ ಸಾಹಸದತ್ತ ಪಯಣಿಸಿದೆ. ಕೆಲವೇ ಕ್ಷಣಗಳಲ್ಲಿ ನಾನು ಆ ಕಾದಂಬರಿಯಲ್ಲಿ ಮುಳುಗಿಬಿಟ್ಟಿದ್ದೆ. ಸಾಮಾನ್ಯವಾಗಿ ಕಾಯುವ ಆಟದಲ್ಲಿ ಸಮಯ ನಿರಂತರವಾಗಿ ಕಾಣುತ್ತದೆ. ಆದರೆ ಈ ಕಾದಂಬರಿಯ ಜೊತೆ ಸಮಯ ಕಳೆದದ್ದೇ ಗೊತ್ತಾಗಲಿಲ್ಲ. ಗಡಿಯಾರ ಹನ್ನೊಂದು ಹೊಡೆದಾಗ ನಾನು ಅದರತ್ತ ಹೆಚ್ಚು ಗಮನ ಕೊಡಲಿಲ್ಲ. ಸ್ವಲ್ಪ ಸಮಯದ ನಂತರ ಒಳಗಿನಿಂದ ಬಂದ ಸದ್ದು ನನ್ನನ್ನು ಮನೆಯಿಂದಲೂ ಪುಸ್ತಕದಿಂದಲೂ ಎಚ್ಚರಿಸಿತ್ತು. ಅದು ವೆರಾಂಡಾ ಮತ್ತು ಊಟದ ಮನೆಯ ನಡುವಿನ ಕೋಣೆಯಿಂದ ಬಂದ ಹೆಜ್ಜೆಯ ಸದ್ದಾಗಿತ್ತು. ನಾನು ತಲೆ ಎತ್ತಿದೆ. ತಕ್ಷಣ ನನಗೆ ಬಾಗಿಲಲ್ಲಿ ಕೊನ್ಸಸಾಂವ್ ಪ್ರತ್ಯಕ್ಷಳಾದದ್ದು ಕಂಡಿತು.

'ಇನ್ನೂ ಹೋಗಿಲ್ಲವಾ?' ಆಕೆ ಕೇಳಿದಳು.

'ಇಲ್ಲ. ಇನ್ನೂ ಮಧ್ಯರಾತ್ರಿ ಆಗಿಲ್ಲವಲ್ಲ'

'ಎಷ್ಟು ತಾಳ್ಮೆ!'

ಕೊನ್ಸಸಾಂವ್ ಮನೆಯ ಚಪ್ಪಲಿಗಳನ್ನು ತೊಟ್ಟು ನಾನಿದ್ದಲ್ಲಿಗೆ ಬಂದಿದ್ದಳು. ನಡುವಿನ ಬಳಿ ಬಿಗಿದಿದ್ದ, ಬಿಳಿ ಬಣ್ಣದ ಸಡಿಲ ಪಾರದರ್ಶಕ ಗೌನನ್ನು ತೊಟ್ಟಿದ್ದಳು. ಸಪೂರವಾಗಿದ್ದ ಅವಳು ಅಲ್ಲಿ ಈ ರೀತಿಯಾಗಿ ಅವತರಿಸಿದ್ದು ಒಂದು ಪ್ರಣಯದ ವಾತಾವರಣವನ್ನು ಸೃಷ್ಟಿಸಿ, ಓದುತ್ತಿದ್ದ ಕಾದಂಬರಿಯ ದನಿಗೆ ಪೂರಕವಾಗಿತ್ತು. ನಾನು ಪುಸ್ತಕವನ್ನು ಮುಚ್ಚಿದೆ. ಆಕೆ ಸೋಫಾದ ಹತ್ತಿರವಿದ್ದ ಎದುರಿನ ಕುರ್ಚಿಯಲ್ಲಿ ಕೂತಳು. ನನ್ನ ಚಟುವಟಿಕೆಯಿಂದ ಅವಳನ್ನು ಎಬ್ಬಿಸಿ ಅವಳ ನಿದ್ದೆ ಕೆಡಿಸಿರಬಹುದೇ ಎನ್ನುವ ಅನುಮಾನವನ್ನು ಪರಿಹರಿಸಲೆಂಬಂತೆ, ಕೂಡಲೇ ಹೇಳಿದಳು:

'ಇಲ್ಲ, ನಾನು ಸಹಜವಾಗೇ ಎಚ್ಚೆತ್ತೆ'.

ಆ ಬಗ್ಗೆ ಅನುಮಾನ ಪಡುತ್ತಲೇ ಆಕೆಯನ್ನು ನೋಡಿದೆ. ಆಕೆಯ ಕಣ್ಣುಗಳು ಇಷ್ಟು ಹೊತ್ತು ಮಲಗಿ ಎದ್ದಂತೆ ಕಾಣುತ್ತಿರಲಿಲ್ಲ. ಆಕೆ ಸುಳ್ಳು ಹೇಳುತ್ತಿರಬಹುದೆನ್ನುವ ವಿಚಾರವನ್ನು ತಕ್ಷಣವೇ ಮನಸ್ಸಿನಿಂದ ಅಟ್ಟಿದೆ. ಆಕೆ ಎಚ್ಚರವಾಗಿದ್ದಕ್ಕೆ ನಾನೇ ಕಾರಣವಾದರೂ. ನನಗೆ ನೋವುಂಟು ಮಾಡದಿರಲು ಸುಳ್ಳು ಹೇಳಿರಬಹುದು ಅನ್ನುವುದು ಆ ಕ್ಷಣಕ್ಕೆ ತೋಚಲಿಲ್ಲ. ನಾನೀಗಾಗಲೇ ಹೇಳಿದ್ದೆ. ಆಕೆ ಒಳ್ಳೆಯ ವ್ಯಕ್ತಿಯಾಗಿದ್ದಳು. ಕರುಣಾಳಾಗಿದ್ದಳು.

'ಇನ್ನೇನು, ಹೆಚ್ಚು ಸಮಯ ಆಗೋದಿಲ್ಲ ಅನ್ಸುತ್ತೆ' ನಾನಂದೆ.

'ನಿಜಕ್ಕೂ ನಿನ್ನ ತಾಳ್ಮೆ ಮೆಚ್ಚುವಂಥದ್ದು. ನಿನ್ನ ಗೆಳೆಯ ಮಲಗಿರೋವಾಗ ನೀನು ಎಚ್ಚರವಾಗಿದ್ದೀ! ಒಬ್ಬನೇ ಕಾಯುತ್ತಿದ್ದೀ! ನಿನಗೆ ದೆವ್ವಗಳ ಭಯವಿಲ್ಲವಾ? ನನ್ನನ್ನು ನೋಡಿದಾಗ ಅವಾಕ್ಕಾಗುತ್ತೀ ಅಂದುಕೊಂಡಿದ್ದೆ'.

'ಹೆಜ್ಜೆಯ ಸದ್ದು ಕೇಳಿದಾಗ ನನಗೆ ಆಶ್ಚರ್ಯವಾಯ್ತು. ಆದರೆ, ಅದು ನೀವೆಂದು ತಕ್ಷಣವೇ ಕಾಣಿಸಿತು'

'ಏನು ಓದುತ್ತಿದ್ದೀ? ಆಹ್ ಗೊತ್ತೂನ್ಸತ್ತೆ. ಥ್ರೀ ಮಸ್ಕಟಿಯರ್ಸ್. ಹೌದಾ?'

'ಹೌದು. ಅದು ಸರಿ. ತುಂಬಾ ಆಸಕ್ತಿಯಿಂದ ಓದಿಸಿಕೊಳ್ಳುತ್ತೆ'

'ನಿನಗೆ ಕಾದಂಬರಿಗಳು ಇಷ್ಟಾನಾ?'

'ಹೌದು'

'ಕಪ್ಪು ಕೂದಲಿನ ಹುಡುಗಿ ಓದಿದ್ದೀಯಾ?'

'ಮಸೇಡೋ ಬರೆದದ್ದು? ಹುಂ ಆ ಪುಸ್ತಕ ನನ್ನ ಹತ್ತಿರ ಮಂಗರಚೀಬಾದಲ್ಲಿದೆ'

'ನನಗೂ ಕಾದಂಬರಿ ಓದೋದು ಇಷ್ಟ. ಆದರೆ ಓದೋಕ್ಕೆ ಸಮಯ ಸಿಗ್ತಾ ಇಲ್ಲ. ನೀನು ಬೇರೇನು ಓದಿದ್ದೀ?'

ನಾನು ಕೆಲ ಕಾದಂಬರಿಗಳನ್ನು ಹೆಸರಿಸಿದೆ. ತಲೆಯನ್ನು ಕುರ್ಚಿಯ ಬೆನ್ನಿಗಾನಿಸಿ, ಅರ್ಧ ತೆರೆದ ಕಣ್ಣುಗಳನ್ನು ದಾಟಿ ನನ್ನನ್ನು ನೋಡುತ್ತಾ ಕೊನ್ಸಸಾಂವ್ ಕೇಳಿಸಿಕೊಂಡಳು. ಆಗಾಗ ನಾಲಗೆಯಿಂದ ತುಟಿಯನ್ನು ತೇವ ಮಾಡಿಕೊಂಡಳು. ನನ್ನ ಮಾತುಗಳನ್ನು